# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.70 : ರಾಜಗೋಪಾಲನಗರ

**ದಿನಾಂಕ: 08.02.2021 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಕಮಲ ಹೆಚ್ ನೋಡಲ್ ಅಧಿಕಾರಿ, ವಾರ್ಡ್ 70ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಕಮಲ ಹೆಚ್ | ನೋಡಲ್‌ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಹೇಮಂತ್‌ಕುಮಾರ್‌ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಪುಟ್ಟೇಗೌಡ | ಕಂದಾಯ ಮೌಲ್ಯಮಾಪಕರು |
| 4 | ತ್ರಿವೇಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 5 | ಪ್ರವೀಣ್ ರಾಜ್ ಎನ್ | ಮಾರ್ಷಲ್, ವಾರ್ಡ್ 70 |
| 6 | ಮಮತ ಆರ್ | ಲಿಂಕ್ ವರ್ಕರ್ |
| 7 | ಮಂಗಳಮ್ಮ | ಲಿಂಕ್ ವರ್ಕರ್ |
| 8 | ಮುರ್ತುಜಾ ಸಾಬಾ ನದಾಫ್ | ಆರಕ್ಷಕ ಇಲಾಖಾ ಸಿಬ್ಬಂದಿ |
| 9 | ಕೆ.ಶಿವಲಿಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 10 | ದೀಪಕ್ ಹೆಚ್ ಸಿ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |

**:ನಡಾವಳಿಯ ವರದಿ:**

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಹೇಮಂತ್‌ಕುಮಾರ್ ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್‌ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತಕೋರಿದರು.

- **ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳಿಗೆ ಕೈಗೊಂಡ ಕ್ರಮಗಳ ಬಗ್ಗೆ**
  - ಖಾಲಿ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಕಂದಾಯ ಅಧಿಕಾರಿ ರವರ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ: ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ, ಸಹಾಯಕ ಕಂದಾಯ ಅಧಿಕಾರಿರವರ ಕಛೇರಿಯನ್ನು ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು.

- **ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:**
  - ಕೆ.ಶಿವಲಿಂಗಯ್ಯ. ಹಿರಿಯ ಆರೋಗ್ಯ ಪರಿವೀಕ್ಷಕರು, ಮಾತನಾಡುತ್ತಾ, ಜಿ.ಕೆ.ಡಬ್ಲ್ಯೂ ಲೇಔಟ್ ಬಳಿ ಪೌರಕಾರ್ಮಿಕರಿಗಾಗಿ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಿಕೊಡುವಂತೆ ಕೋರಿದರು.
    - ಇದಕ್ಕೆ ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತನಾಡಿ ಅನುದಾನದ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.
  - ಕೆ.ಶಿವಲಿಂಗಯ್ಯ. ಹಿರಿಯ ಆರೋಗ್ಯ ಪರಿವೀಕ್ಷಕರು, ಮುಂದುವರೆದು ಮಾತನಾಡುತ್ತ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಾದ, ಚಿಕ್ಕಮ್ಮ, ಮುಲ್ಲಯ್ಯ, ಶಿವಣ್ಣ, ನೀಲಮ್ಮ(ಮರಣ ಹೊಂದಿರುತ್ತಾರೆ) ಇವರಿಗೆ 60 ವರ್ಷಗಳಾಗಿರುವುದರಿಂದ ಶೀಘ್ರದಲ್ಲಿಯೇ ಕೆಲಸದಿಂದ ನಿವೃತ್ತರಾಗುತ್ತಿದ್ದು, ಸದರಿಯವರುಗಳ ಅವಲಂಬಿತರಿಗೆ ಕೆಲಸ ನೀಡಿ ಸದರಿಯವರ ಕುಟುಂಬಕ್ಕೆ ನೆರವು ನೀಡಬೇಕೆಂದು ವಿನಂತಿಸಿದರು.
    - ಇದಕ್ಕೆ ನೋಡಲ್ ಅಧಿಕಾರಿರವರು ಪ್ರತಿಕ್ರಿಯಿಸಿ ಕಡತವನ್ನು ಸಿದ್ದಪಡಿಸಿ ಸಮುಚ್ಚಿತ ಮಾರ್ಗದಲ್ಲಿ ಸಲ್ಲಿಸಲು ಸೂಚಿಸಿದರು.
  - ಶಿವಲಿಂಗಯ್ಯ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70ರವರು ಮಾತಾನಾಡಿ ವಾರ್ಡ್ 70ರ ವ್ಯಾಪ್ತಿಯಲ್ಲಿ ದಿನಾಂಕ:01/01/2021 ರಿಂದ 31/01/2021 ರವರೆಗೆ ಮಾಸ್ಕ್ ಧರಿಸದವರಿಂದ ರೂ.25250/-ಗಳ ದಂಡವನ್ನು ಸಂಗ್ರಹಿಸಲಾಗಿದೆ, ಕಸವನ್ನು ಎಲ್ಲೆಂದರಲ್ಲಿ ಸುರಿಯುವವರಿಂದ ರೂ6201/-ಗಳ ದಂಡವನ್ನು ಸಂಗ್ರಹಿಸಲಾಗಿದೆ ಹಾಗೂ ಮಾಸ್ಕ್ ಧರಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ ಎಂದು ತಿಳಿಸಿದರು.
  - ಶಿವಲಿಂಗಯ್ಯ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70ರವರು ಮಾತಾನಾಡಿ ಅನ್ನಪೂರ್ಣೇಶ್ವರಿ ನಗರದಲ್ಲಿರುವ DWC Centre ಬಳಿ ಕಸ ಹಾಕಲು ಸಾರ್ವಜನಿಕರು ಜಾಗ ಬಿಡುತ್ತಿಲ್ಲ. ಇದರಿಂದ ಕಸ ವಿಂಗಡಿಸಲು ತೊಂದರೆಯಾಗಿರುತ್ತದೆ. ಹಾಗೂ ಪೌರಕಾರ್ಮಿಕರ ಸುರಕ್ಷತಾ ದೃಷ್ಟಿಯಿಂದ DWC Centre ಬಳಿ ಇರುವ ಕುರುಚಲುಗಳನ್ನು ತೆಗೆದು ಸುತ್ತಲೂ ಕಾಂಕ್ರೀಟ್ ಅಳವಡಿಸಿಕೊಡಬೇಕಾಗಿ ಕೋರಿದರು.
    - ಇದಕ್ಕೆ ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತನಾಡಿ ಈ ಕುರಿತು ವಾರ್ಡ್ ಇಂಜಿನಿಯರ್ ರವರಿಗೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.
  - ಮಂಗಳ ಲಿಂಕ್ ವರ್ಕರ್ ರವರು ಮಾತನಾಡಿ, ಕಳೆದ 5 ತಿಂಗಳಿಂದ ನಮಗೆ ವೇತನ ನೀಡಿರುವುದಿಲ್ಲ, ಇದರಿಂದ ಆರ್ಥಿಕ ಹಿನ್ನಡೆ ಉಂಟಾಗಿದ್ದು, ಈ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ತರಬೇಕೆಂದು ಕೋರಿದರು.
    - ಇದಕ್ಕೆ ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತನಾಡಿ ಈ ಕುರಿತು ಸಂಬಂಧಪಟ್ಟವರ ಗಮನಕ್ಕೆ ತಂದು ಖುದ್ದು ವಿಚಾರಿಸುವುದಾಗೀ ತಿಳಿಸಿದರು.

- **ರಸ್ತೆ ಗುಂಡಿಗಳ ನಿರ್ವಹಣೆ ಬಗ್ಗೆ**
  - ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಟ್ಟಿ ಮಾಡಿಕೊಂಡು ವೆಟ್ ಮಿಕ್ಸ್ ಅಳವಡಿಸಲಾಗಿದೆ. ಅಂದಾಜು 280 ಟನ್‌ಗಳಷ್ಟು ಡಾಂಬರು ಮಿಕ್ಸ್ ಬೇಕಾಗಿರುತ್ತದೆ ಎಂದು ತಿಳಿಸಿದರು.

* <u>ನೀರು ಸರಬರಾಜು ಮತ್ತು ಒಳಚರಂಡಿ ಸಮಸ್ಯೆಗಳ ಬಗ್ಗೆ</u>
  - ನೋಡಲ್ ಅಧಿಕಾರಿ ರವರಿಗೆ ದೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟ್‌ನ ಮುಖ್ಯ ರಸ್ತೆಯಲ್ಲಿ ಜಲಮಂಡಳಿಗೆ ಸಂಬಂಧಿಸಿದ ಒಳಚರಂಡಿ ಅವ್ಯವಸ್ಥೆಯ ಬಗ್ಗೆ ನಾಗರೀಕರೊಬ್ಬರು ದೂರವಾಣಿ ಮುಖಾಂತರ ತಿಳಿಸಿದ್ದರು. ಈ ಸಂಬಂಧ ನೋಡಲ್ ಅಧಿಕಾರಿರವರು ಶ್ರೀ. ದೀಪಕ್ ಹೆಚ್ ಸಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ತಿಳಿಸಲು ಸೂಚಿಸಿದರು.
  - ಶ್ರೀ. ದೀಪಕ್ ಹೆಚ್ ಸಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡಿ ದೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟ್‌ನ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಕೊಳವೆ ಪಕ್ಕದಲ್ಲಿಯೇ ಬೆಸ್ಕಾಂ ಎನ್ 4 ರವರು ಕಾಮಗಾರಿ ನಡೆಸುವ ವೇಳೆ ಕೇಬಲ್‌ಗಳನ್ನು ಒಳಚರಂಡಿ ಕೊಳವೆ ಮಾರ್ಗಗಳ ಒಳಗೆ ಹಾದು ಹೋಗಿದ್ದು, ಒಳಚರಂಡಿ ಕೊಳವೆಗಳು ಹಾಗೂ ಮ್ಯಾನ್‌ಹೋಲ್‌ಗಳು ಹಾಳಾಗಿರುತ್ತವೆ. ಉಪ ವಿಭಾಗ ಪೀಣ್ಯ 4ನೇ ಹಂತ ರವರಿಗೆ ಈ ಸಂಬಂಧ ಪತ್ರವನ್ನು ಬರೆಯಲಾಗಿದೆ ಹಾಗೂ ಅವರಿಂದ ಉತ್ತರ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು ಮತ್ತು ಈ ಸಂಬಂಧ ಬೆಸ್ಕಾಂ ಎನ್ 4 ರವರಿಗೆ ನೋಡಲ್ ಅಧಿಕಾರಿ ರವರಿಂದ ಪತ್ರವನ್ನು ಬರೆಯಲು ಕೋರಿದರು.
    - ನೋಡಲ್ ಅಧಿಕಾರಿ ರವರು ಬೆಸ್ಕಾಂ ಎನ್ 4 ರವರಿಗೆ ಪತ್ರ ಬರೆಯುವಂತೆ ಸದಸ್ಯ ಕಾರ್ಯದರ್ಶಿರವರಿಗೆ ಸೂಚಿಸಿದರು.

* ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

* ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಹೇಮಂತ್‌ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/2/2021

**ಸದಸ್ಯ ಕಾರ್ಯದರ್ಶಿ–ವಾರ್ಡ್ 70 ಹಾಗೂ**
**ಸಹಾಯಕ ಅಭಿಯಂತರರು,**

Hlamala.
**(ಕಮಲ ಹೆಚ್)**
**ನೋಡಲ್ ಅಧಿಕಾರಿ ವಾರ್ಡ್–70**

<u>ಪ್ರತಿಯನ್ನು:</u>

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರರವರ ಆದ್ಯ ಗಮನಕ್ಕೆ ತರಲಾಗಿದೆ.
2) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
9) ಕಛೇರಿ ಕಡತಕ್ಕೆ